# 2014-15ನೇ ಸಾಲಿನ "ಹೂ ಕೃಷಿಗೆ ಉತ್ತೇಜನ" ಯೋಜನೆ ಅನುಷ್ಠಾನದ ಮಾರ್ಗಸೂಚಿಗಳು.

1. **ಯೋಜನೆಯ ಹೆಸರು : ಹೂ ಕೃಷಿಗೆ ಉತ್ತೇಜನ** (Incentives for Floriculture)

   ಲೆಕ್ಕ ಶೀರ್ಷಿಕೆ : 2401-002-108-2-55

## 2 ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:

ಕರ್ನಾಟಕ ರಾಜ್ಯದಲ್ಲಿ ಉನ್ನತ ತಂತ್ರಜ್ಞಾನದ ಪುಷ್ಪ ಬೇಸಾಯವು 1990ರ ದಶಕದಲ್ಲಿ ಪ್ರಾರಂಭವಾಗಿದ್ದು, ಉನ್ನತ ತಂತ್ರಜ್ಞಾನ ಬಳಸಿ, ಹಸಿರು ಮನೆಗಳಲ್ಲಿ ಗುಲಾಬಿ, ಕಾರ್ನೇಷನ್, ಜರ್ಬೆರಾ, ಸೇವಂತಿಗೆ, ಆರ್ಕಿಡ್ಸ್, ಆಂಥೂರಿಯಂ, ಮುಂತಾದ ಪುಷ್ಪಗಳನ್ನು ಬೆಳೆಸಿ ಸ್ಥಳೀಯ ಮಾರುಕಟ್ಟೆ, ದೇಶದ ಹಾಗೂ ವಿದೇಶಿ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ಹೆಚ್ಚು ಹೆಚ್ಚು ರೈತರು ಆಸಕ್ತಿಯನ್ನು ತೋರಿಸಿರುತ್ತಾರೆ. ಪ್ರಾರಂಭದಲ್ಲಿ ಇಂಥಹ ಉನ್ನತ ತಂತ್ರಜ್ಞಾನದ ಪುಷ್ಪ ಬೇಸಾಯವು ಸಾಕಷ್ಟು ಆದಾಯವನ್ನು ಬೆಳೆಗಾರರಿಗೆ ತಂದರೂ, ನಂತರದ ದಿನಗಳಲ್ಲಿ ಹಲವಾರು ಕಾರಣಗಳಿಂದಾಗಿ ಈ ಉದ್ದಿಮೆಯ ಬೆಳವಣಿಗೆ ಹಿಮ್ಮುಖವಾಗುವುದರ ಜೊತೆಗೆ, ಇವುಗಳನ್ನು ಅವಲಂಬಿಸಿದವರು ಆರ್ಥಿಕ ತೊಂದರೆಗೆ ಸಿಲುಕಿ ಅಂತಹ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಅನೇಕ ಹೈಟೆಕ್ ಪುಷ್ಪೋದ್ಯಮ ಘಟಕಗಳ ಪುನಃಶ್ಚೇತನ ಹಾಗೂ ಉನ್ನತ ತಂತ್ರಜ್ಞಾನದ ಪುಷ್ಪೋದ್ಯಮದ ಪುನಃಶ್ಚೇತನಕ್ಕೆ ತೋಟಗಾರಿಕೆ ಇಲಾಖೆಯು **"ಹೂ ಕೃಷಿಗೆ ಉತ್ತೇಜನ"** ಎಂಬ ಒಂದು ವಿಶೇಷ ಹೊಸ ಯೋಜನೆಯನ್ನು **2014-15ನೇ** ಸಾಲಿನಿಂದ ಅನುಷ್ಠಾನ ಮಾಡುತ್ತಿದೆ.

### ಯೋಜನೆಯನ್ನು ಅನುಷ್ಠಾನ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳು.

### 3. ಯೋಜನೆಯ ಉದ್ದೇಶಗಳು:

- ರಾಜ್ಯದಲ್ಲಿ ಪ್ರಸಕ್ತ ಇರುವ ಹಳೆಯ ಹೈಟೆಕ್ ಪುಷ್ಪೋದ್ಯಮ ಘಟಕಗಳ ಪುನಃಶ್ಚೇತನಗೊಳಿಸುವುದು.
- ಹವಾಗುಣಕ್ಕೆ ಹೊಂದುವಂತಹ ಹೊಸ ಹಾಗೂ ವಾಣಿಜ್ಯ ತಳಿಗಳನ್ನು ಪರಿಚಯಿಸುವುದು.
- ಹಾಲಿ ಇರುವ ಪುಷ್ಪೋದ್ಯಮ ಘಟಕಗಳಿಂದ ಪುಷ್ಪಗಳ ಉತ್ಪಾದನೆಯ ಪ್ರಮಾಣ ಮತ್ತು ಗುಣಮಟ್ಟವನ್ನು ಹೆಚ್ಚಿಸುವುದು.
- ರಾಜ್ಯದಲ್ಲಿ ಹೆಚ್ಚು ಹೈಟೆಕ್ ಪುಷ್ಪೋದ್ಯಮ ಘಟಕಗಳನ್ನು ಹೆಚ್ಚು ಸಂಖ್ಯೆಯಲ್ಲಿ ತೆಗೆದುಕೊಳ್ಳಲು ಪ್ರೋತ್ಸಾಹಿಸುವುದು.
- ಹೂ ಬೆಳೆಗಳ ರಫ್ತಿನಿಂದ ರೈತರಿಗೆ ಮತ್ತು ರಾಜ್ಯಕ್ಕೆ ಬರುವ ಆದಾಯವನ್ನು ಹೆಚ್ಚಿಸುವುದು.
- ಸ್ಥಳೀಯ, ದೇಶದಲ್ಲಿ ಹಾಗೂ ವಿದೇಶಿ ಮಾರುಕಟ್ಟೆಗಳಲ್ಲಿ ರಾಜ್ಯದ ಹೂ ಬೆಳೆಗಾರರನ್ನು ಹೆಚ್ಚು ಸ್ಪರ್ಧಾತ್ಮಕವಾಗಲು ಪ್ರೋತ್ಸಾಹಿಸುವುದು.
- ಈ ಯೋಜನೆಯಿಂದ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಕ / ಯುವತಿಯರ ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವುದು.
- ಹೂ. ಬೆಳೆಗಾರರ, ಆರ್ಥಿಕ ಮಟ್ಟವನ್ನು ಹೆಚ್ಚಿಸುವುದು.

### 4. ಯೋಜನೆಯ ಕಾರ್ಯಕ್ರಮಗಳು :

1. ಹಸಿರುಮನೆಯಲ್ಲಿ ಹಳೆಯ ಹಾಗೂ ಅನುತ್ಪಾದಿಕ ಗಿಡಗಳನ್ನು ತೆಗೆಯುವುದು ಮತ್ತು ಹೊಸ ಗಿಡಗಳನ್ನು ನೆಡಲು ಸಹಾಯಧನ ಒದಗಿಸುವುದು. (Assistance for Replanting in Greenhouses).

2. ಹಸಿರು ಮನೆಗಳಲ್ಲಿ ಶಿಥಿಲಗೊಂಡಿರುವ / ಹಾಳಾಗಿರುವ ಪಾಲಿಥೀನ್ ಶೀಟ್‌ಗಳ ಬದಲಾವಣೆಗೆ ಸಹಾಯಧನ (Assistance for Replacement of Polythene Sheets).

3. ಹೈಟೆಕ್ ಪುಷ್ಪ ಬೆಳೆಗಾರರು ನಿರ್ಮಿಸಿರುವ ಶೀಥಲ ಗೃಹಗಳಿಗೆ ಬಳಸುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.2/-ರಂತೆ ಸಹಾಯಧನ ಒದಗಿಸುವುದು.

**5 ಅನುದಾನ ಮತ್ತು ಸಹಾಯಧನ :**

**ಅ) ಹಸಿರುಮನೆಯಲ್ಲಿ ಹಳೆಯ ಮತ್ತು ಅನುತ್ಪಾದಕ ಹೂವಿನ ಗಿಡಗಳನ್ನು ತೆಗೆಯುವುದು ಮತ್ತು ಹೊಸ ಗಿಡಗಳನ್ನು ನೆಡಲು ಸಹಾಯಧನ** (Assistance for Replanting in Greenhouses):

| ಕ್ರ ಸಂ | ಘಟಕದ ವಿವರಗಳು | ಬೆಳೆಗಳು | ಸಹಾಯಧನದ ಮೊತ್ತ |
|---|---|---|---|
| 1. | ಹಳೆಯ ಮತ್ತು ಅನುತ್ಪಾದಕ ಗಿಡಗಳನ್ನು ತೆಗೆಯುವುದು ಮತ್ತು ಹೊಸಗಿಡ ನೆಡಲು ಸಹಾಯಧನ (Subsidy for Replanting in Greenhouses) | ಹಸಿರು ಮನೆಯಲ್ಲಿ ಬೇಸಾಯ ಮಾಡಿರುವ ಗುಲಾಬಿ, ನೇರ್ಷನ್, ಆಂಥೂರಿಯಂ, ಆರ್ಕಿಡ್ಸ್, ಸೇವಂತಿಗೆ (Chrysenthemum TissueCulturePlants) ಬೆಳೆಗಳು. | ಪ್ರತಿ ಚದರ ಮೀಟರ್‌ಗೆ ರೂ. 50.00 ರಂತೆ ಗರಿಷ್ಠ 2.00 ಹೆಕ್ಟೇರ್ (20,000ಚ.ಮೀ) ರೂ.10.00 ಲಕ್ಷ ಸಹಾಯಧನ ಮೀರದಂತೆ ಅಥವಾ ವೆಚ್ಚ ಶೇ 50ರಂತೆ ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು. |

**ಸೂಚನೆ:** ಪ್ರತಿ ಫಲಾನುಭವಿಗೆ ಗರಿಷ್ಠ 2 ಹೆಕ್ಟೇರ್ (20,000ಚ.ಮೀ)ವಿಸ್ತೀರ್ಣಕ್ಕೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ.

**ಆ.ಹಸಿರು ಮನೆಗಳ polythene sheet ಗಳ ಬದಲಾವಣೆಗೆ ಸಹಾಯಧನ:**

| ಕ್ರ. ಸಂ | ಘಟಕದ ವಿವರಗಳು | ಬೆಳೆಗಳು | ಸಹಾಯಧನದ ಮೊತ್ತ (ಪ್ರತಿ ಚದರ ಮೀಟರ್‌ಗೆ) |
|---|---|---|---|
| 1. | ಹಸಿರು ಮನೆಗಳಲ್ಲಿ ಶಿಥಿಲಗೊಂಡಿರುವ/ ಹಾಳಾಗಿರುವ polythene sheet ಗಳ ಬದಲಾವಣೆಗೆ ಸಹಾಯಧನ (subsidy for replacement with new polythene sheet) | ಹಸಿರು ಮನೆಯಲ್ಲಿ ಗುಲಾಬಿ, ಜರ್ಬರಾ,ಕಾರ್ನೇಷನ್, ಆಂಥೂರಿಯಂ, ಆರ್ಕಿಡ್ಸ್,ಸೇವಂತಿಗೆ (tissue culture plants ಬೆಳೆಗಳು. | ಪ್ರತಿ ಚದರ ಮೀಟರ್‌ಗೆ ರೂ.30 ರಂತೆ ಗರಿಷ್ಠ 2.00 ಹೆಕ್ಟೇರ್ (20,000 ಚ.ಮೀ)/ಗರಿಷ್ಠ ರೂ. 6.00ಲಕ್ಷಗಳಿಗೆ ಮೀರದಂತೆ **ಅಥವಾ** ವೆಚ್ಚದ ಶೇಕಡ 50ರಂತೆ ಯಾವುದು ಕಡಿಮೆ ಅದನ್ನು ಪರಿಗಣಿಸುವುದು |

**ಸೂಚನೆ**: ಪ್ರತಿ ಫಲಾನುಭವಿಗೆ ಗರಿಷ್ಠ 2 ಹೆಕ್ಟರ್ (20,000ಚ.ಮೀ) ವಿಸ್ತೀರ್ಣಕ್ಕೆ ಸಹಾಯಧನವನ್ನು ಮಿತಿಗೊಳಿಸುವುದು.

**ಇ. ಹೈಟೆಕ್ ಪುಷ್ಪ ಬೆಳೆಗಾರರು ನಿರ್ಮಿಸಿರುವ ಶೀಥಲ ಗೃಹಗಳಿಗೆ ಬಳಸುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.2ರತೆ ಸಹಾಯಧನ ಒದಗಿಸುವುದು.**

| ಕ್ರ.ಸಂ | ಘಟಕದ ವಿವರಗಳು | ಬೆಳೆಗಳು | ಸಹಾಯಧನದ ಮೊತ್ತ |
|---|---|---|---|
| 1. | ಹೈಟೆಕ್ ಪುಷ್ಪ ಬೆಳೆಗಾರರು ನಿರ್ಮಿಸಿರುವ ಶೀಥಲ ಗೃಹಗಳಿಗೆ ಬಳಸುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.2ರತೆ ಸಹಾಯಧನ ಒದಗಿಸುವುದು. | ಹಸಿರು ಮನೆಗಳಲ್ಲಿ ಬೆಳೆದ ಗುಲಾಬಿ, ಜರ್ಬರಾ, ಕಾರ್ನೆಷನ್, ಆಂಥೂರಿಯಂ, ಆರ್ಕಿಡ್ಸ್,ಸೇವಂತಿಗೆ ಹೂಗಳನ್ನು ಶೇಖರಣೆ ಮಾಡುವ ಶೀಥಲಗೃಹಗಳನ್ನು ಪರಿಗಣಿಸುವುದು. | ಶೀಥಲ ಗೃಹಗಳಲ್ಲಿ ಬಳಸುವ ಪ್ರತಿ ಯೂನಿಟ್ ವಿದ್ಯುತ್‌ಗೆ ರೂ.2.00ರಂತೆ ಪ್ರತಿ ತಿಂಗಳಿಗೆ ಗರಿಷ್ಠ 2,000 ಯೂನಿಟ್‌ಗಳಿಗೆ ಮಿತಿಗೊಳಿಸುವುದು. |

- **ತಾಂತ್ರಿಕ ವೈಶಿಷ್ಟ್ಯತೆಗಳು :**

**ಅ. ಹಸಿರುಮನೆಯಲ್ಲಿ ಬೆಳೆದಿರುವ ಹಳೆಯ ಅನುತ್ಪಾದಕ ಗಿಡಗಳನ್ನು ತೆಗೆಯುವುದು ಮತ್ತು ಹೊಸ ಗಿಡಗಳನ್ನು ನೆಡಲು ಸಹಾಯಧನ ಒದಗಿಸುವುದು. (subsidy for replacement and replanting in greenhouses):**

ವಾಣಿಜ್ಯ ಪುಷ್ಪಗಳನ್ನು ಹಸಿರುಮನೆಯಲ್ಲಿ ಉನ್ನತ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಕಳೆದ ಮೂರು ವರ್ಷಗಳಿಂದ ಪುಷ್ಪ ಕೃಷಿ ಮಾಡುತ್ತಿರುವ ರೈತರು/ಸಂಸ್ಥೆಗಳು ಸಹಾಯಧನಕ್ಕೆ ಅರ್ಹರಿರುತ್ತಾರೆ. ಹಾಗೂ ಇಂತಹ ಘಟಕ 2009-10 ಕ್ಕೂ ಪೂರ್ವದಲ್ಲಿ ನಿರ್ಮಾಣ ಮಾಡಿರಬೇಕು ಹಾಗೂ ಬೆಳೆ ಬೆಳೆಯುತ್ತಿರಬೇಕು. ಹಳೆಯ ಅನುತ್ಪಾದಕ ಗಿಡಗಳನ್ನು ತೆಗೆದು ಹೊಸ ಗಿಡಗಳನ್ನು ನಾಟಿ ಮಾಡಲು ಹಾಗೂ ಶಿಥಿಲಗೊಂಡಿರುವ ಮತ್ತು ಹಾಳಾಗಿರುವ ಹಳೆಯ ಪಾಲೀಥೀನ್ ಶೀಟ್‌ನ್ನು ತೆಗೆದು ಹೊಸ ದಾಗಿ ಅಳವಡಿಸಲು 31.03.2011ರ ಪೂರ್ವದಲ್ಲಿ ನಿರ್ಮಿಸಿರುವ ಘಟಕಗಳು (ಪಾಲಿಹೌಸ್‌ಗಳು)ಮಾತ್ರ ಅರ್ಹತೆ ಹೊಂದಿರುತ್ತವೆ.

ಹಸಿರು ಮನೆಯಲ್ಲಿ ಪ್ರಸ್ತುತ ಬೆಳೆದಿರುವ ತಳಿಗಳು ಹಳೆಯದಾಗಿದ್ದು, ((senile and un productive) ಕೀಟ ಮತ್ತು ರೋಗ ಬಾಧೆಯಿಂದ ಮತ್ತು ಇಳುವರಿ ಕಡಿಮೆಯಾದ ಹಳೆಯ ಗಿಡಗಳನ್ನು ತೆಗೆದು ಹೊಸ ತಳಿ / ಹೊಸ ಗಿಡಗಳನ್ನು ನಾಟಿ ಮಾಡುವ ರೈತರು / ಸಂಸ್ಥೆಗಳಿಗೆ ಸಹಾಯಧನ ಪಡೆಯಲು ಅರ್ಹರಿರುತ್ತಾರೆ.

ಹಸಿರು ಮನೆಯಲ್ಲಿ ಬೆಳೆಯುತ್ತಿರುವ **ಗುಲಾಬಿ, ಜರ್ಬರಾ, ಕಾರ್ನೇಷನ್, ಆಂಥೂರಿಯಂ, ಆರ್ಕಿಡ್ಸ್ ಮತ್ತು ಸೇವಂತಿಗೆ** (tissue culture Chrysanthemum plants).ಬೆಳೆಗಳ Replacement & Replanting ಗಾಗಿ ಮಾತ್ರ ಸಹಾಯಧನ ನೀಡುವುದು.

ವಿದೇಶದಿಂದ ಅಮದು ಮಾಡಿಕೊಂಡಿರುವ,ಉತ್ತಮ ಗುಣಮಟ್ಟದ, ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ತಳಿಗಳನ್ನು ಖರೀದಿಸುವ ಫಲಾನುಭವಿಗಳಿಗೆ ಮೊದಲ ಪ್ರಾಶಸ್ತ್ಯ ನೀಡುವುದು.

**ವಿವಿಧ ಬೆಳೆಗಳ ಹೊಸಗಿಡಗಳನ್ನು ನೆಡಲು ಹಳೆ ಗಿಡಗಳ ಕನಿಷ್ಟ ವಯಸ್ಸು:**31.03.2011ರ ಪೂರ್ವದಲ್ಲಿ ನೆಟ್ಟಿರಬೇಕು.

**ಗುಲಾಬಿ - 3-5 ವರ್ಷಗಳಾಗಿರಬೇಕು.**

**ಜರ್ಬರಾ - 3 ವರ್ಷಗಳಾಗಿರಬೇಕು.**

**ಕಾರ್ನೇಷನ್ - 3 ವರ್ಷಗಳಾಗಿರಬೇಕು.**

**ಆಂಥೂರಿಯಂ - 5 ವರ್ಷಗಳಾಗಿರಬೇಕು. ( 31.03.2009ರ ಪೂರ್ವದಲ್ಲಿ)**

**ಆರ್ಕಿಡ್ಸ್ - 5 ವರ್ಷಗಳಾಗಿರಬೇಕು. (31.03.2009ರ ಪೂರ್ವದಲ್ಲಿ )**

**ಸೇವಂತಿಗೆ - 2 ವರ್ಷಗಳಾಗಿರಬೇಕು**

## ಆ.ಹಸಿರು ಮನೆಗಳ polythene sheet ಗಳ ಬದಲಾವಣೆಗೆ ಸಹಾಯಧನ:

1. ಹಸಿರುಮನೆಗಳಿಗೆ ಹೊದಿಸಿರುವ UV stabilized polythene sheet ಕನಿಷ್ಠ ಮೂರು ವರ್ಷ ಹಳೆಯದಾಗಿರಬೇಕು ಹಾಗೂ Polythene Sheet ಹರಿದಿದ್ದಲ್ಲಿ / ಹಾಳಾಗಿದ್ದಲ್ಲಿ ಮಾತ್ರವೇ Polythene Sheet ಬದಲಾಯಿಸಲು ಸಹಾಯಧನಕ್ಕೆ ಅರ್ಹವಾಗಿರುತ್ತದೆ.
2. ಹಸಿರುಮನೆಯಲ್ಲಿ ಪುಷ್ಪ ಕೃಷಿ ಮಾಡುತ್ತಿರುವ ಮತ್ತು ಇನ್ನೂ ಮೂರು ವರ್ಷ ಪುಷ್ಪ ಕೃಷಿ ಮಾಡಲು ಒಪ್ಪುವ ರೈತರು ಮಾತ್ರ ಸಹಾಯಧನ ನೀಡಲು ಅರ್ಹರಿರುತ್ತಾರೆ.
3. ಯಾವುದೇ ಕಾರಣಕ್ಕೂ ಹಸಿರುಮನೆಯಲ್ಲಿ ನರ್ಸರಿ ಅಥವಾ ತರಕಾರಿ ಅಥವಾ ಅಲಂಕಾರಿಕ ಗಿಡಗಳನ್ನು ಬೇಸಾಯ ಮಾಡುತ್ತಿರುವ ಮಾಡಲು ಉದ್ದೇಶಿಸಿರುವ ಹಸಿರುಮನೆಗಳ ಘಟಕಗಳನ್ನು ಸಹಾಯಧನಕ್ಕೆ ಪರಿಗಣಿಸುವಂತಿಲ್ಲ ಮತ್ತು ಅರ್ಹತೆ ಇರುವುದಿಲ್ಲ.
4. **ಉತ್ತಮ ಗುಣಮಟ್ಟದ 200 ಮೈಕ್ರೋನ್, UVstabilize ಪಾಲಿ ಶೀಟ್‌ನ್ನು ಬಳಸಬೇಕು.**
5. **ರೈತರು ನಿರ್ಮಿಸಿರುವ ಹಸಿರುಮನೆ ವಿಸ್ತೀರ್ಣಕ್ಕೆ ಅನುಗುಣವಾಗಿ ಸಹಾಯಧನವನ್ನು ಪ್ರತಿ ಚದರ ಮೀಟರ್‌ಗೆ ರೂ.30/- ರಂತೆ ಲೆಕ್ಕಚಾರ ಮಾಡಿ ಗರಿಷ್ಟ 2.00 ಹೆಕ್ಟೇರಗಗ ಪ್ರದೇಶಕ್ಕೆ 20,000/- ಚದರ ಮೀಟರ್ ವಿಸ್ತೀರ್ಣಕ್ಕೆ ಸೀಮಿತಗೊಳಿಸುವುದು ಬಟವಾಡೆ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ.**

ಈ ಯೋಜನೆಯಡಿ ಯಾವುದೇ ಸಹಾಯಧನವನ್ನು ಫಲಾನುಭವಿಗೆ ವಿತರಿಸುವಾಗ ಹಳೆ ಪಾಲಿಥೀನ್ ಶೀಟ್ ಬದಲಿಸುವ ಪೂರ್ವದ ಮತ್ತು ಬದಲಿಸಿದ ನಂತರದ ಎರಡೂ ಹಂತಗಳಲ್ಲಿ ಫಲಾನುಭವಿ ಸಹಿತ ನಾಲ್ಕು ಕೋನಗಳಿಂದ ಸ್ಪಷ್ಟವಾಗಿ ಕಾಣುವಂತೆ ಛಾಯಾಚಿತ್ರಗಳನ್ನು ತೆಗೆಯತಕ್ಕದ್ದು,ಹಾಗೂ ಪಾಲಿಥೀನ್ ಶೀಟ್ ಅನ್ನು ಹೊದಿಸಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು. ಕ್ರಮ ಸಂಖ್ಯೆ:1,2,3 ರ ಅಂಶಗಳನ್ನು ಅಳವಡಿಸಿ ರೈತರು ಈ ಬಗ್ಗೆ ರೂ.100/- ಛಾಪಾಕಾಗದದಲ್ಲಿ ಒಪ್ಪಿಗೆ ಪತ್ರವನ್ನು ನೀಡಬೇಕು/ ರೈತರಿಂದ ಪಡೆಯಬೇಕು.

## ಇ. ಹೈಟೆಕ್ ಪುಷ್ಪ ಬೆಳೆಗಾರರು ನಿರ್ಮಿಸಿರುವ ಶೀಥಲ ಗೃಹಗಳಿಗೆ ಬಳಸುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.2ರತೆ ಸಹಾಯಧನ.

- ಹಸಿರುಮನೆಯಲ್ಲಿ ಬೆಳೆಯುತ್ತಿರುವ **ಗುಲಾಬಿ, ಜರ್ಬೆರಾ, ಕಾರ್ನೇಷನ್, ಆರ್ಕಿಡ್ಸ್ ಮತ್ತು ಸೇವಂತಿಗೆ** ಪುಷ್ಪಗಳನ್ನು ಹಾಗೂ ಇತರೆ ಪುಷ್ಪಗಳ ಶೇಖರಣೆ ಮಾಡುವ ಶೀಥಲಗೃಹಗಳಿಗೆ ಬಳಸುವ ವಿದ್ಯುಚ್ಛಕ್ತಿಗೆ ಮಾತ್ರ ಸಹಾಯಧನ ನೀಡುವುದು.
- ಹೂಗಳನ್ನು ಶೇಖರಣೆ ಮಾಡಲು ಚಾಲನೆಯಲ್ಲಿರುವ ಶೀಥಲ ಗೃಹಗಳು ಮಾತ್ರ ವಿದ್ಯುತ್ ಸಹಾಯಧನಕ್ಕೆ ಅರ್ಹವಾಗಿರುತ್ತವೆ.
- ಸದರಿ ಸಹಾಯಧನವನ್ನು ಪಡೆಯಲಿಚ್ಚಿಸುವ ಹೂಗಳನ್ನು ಶೇಖರಿಸುವ ಶೀಥಲಗೃಹ ಮಾಲೀಕರು ಕಡ್ಡಾಯವಾಗಿ ಅನುಬಂಧ-3 ರಲ್ಲಿರುವ ನಮೂನೆಯಂತೆ ತೋಟಗಾರಿಕೆ ಇಲಾಖೆಯಲ್ಲಿ ನೊಂದಣಿ ಮಾಡತಕ್ಕದ್ದು.
- ಶೀಥಲ ಗೃಹಗಳು ಕಾರ್ಯಾರಂಭ ಮಾಡಿದ ನಂತರ ವಿದ್ಯುತ್ ಸಹಾಯಧನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳತಕ್ಕದ್ದು.
- ಶೀತಲಗೃಹಗಳು ಪ್ರತಿ ತಿಂಗಳು ಬಳಸುವ ಪ್ರತಿ ಯೂನಿಟ್ ವಿದ್ಯುತ್‌ಗೆ ರೂ.2/-ರಂತೆ ಸಹಾಯಧನವನ್ನು ಪ್ರತಿ ತಿಂಗಳು ಗರಿಷ್ಠ 2,000 ಯೂನಿಟ್‌ಗಳಿಗೆ ಮಿತಿಗೊಳಿಸಿ ಸಹಾಯಧನಕ್ಕೆ ಪರಿಗಣಿಸುವುದು.
- ಇಂತಹ ಹೂ ಶೇಖರಣಾ ಶೀಥಲಗೃಹಗಳಿಗೆ ಪುಷ್ಪ ಘಟಕದವರು ಶೀಥಲ ಗೃಹಕ್ಕೆ ಪ್ರತ್ಯೇಕ ವಿದ್ಯುತ್ ಮೀಟರ್ ಅನ್ನು ಕಡ್ಡಾಯವಾಗಿ ಅಳವಡಿಸಬೇಕು.

**6. ಫಲಾನುಭವಿಗಳ ಅರ್ಹತೆ :**

<u>ಅ) ಹಸಿರುಮನೆಯಲ್ಲಿ ಹಳೆಯ ಅನುತ್ಪಾದಿತ ಗಿಡಗಳನ್ನು ತೆಗೆಯುವುದು ಮತ್ತು ಹೊಸ ಗಿಡಗಳನ್ನು ನೆಡಲು ಸಹಾಯಧನ (subsidy for replanting in greenhouses)</u>:

- ಫಲಾನುಭವಿಗಳು ರೈತರಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ, ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ,ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು. ಹಾಗೂ ಒಪ್ಪಿಗೆ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
- ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
- ಎಲ್ಲಾ ವರ್ಗದ ಫಲಾನೂಭವಿಗಳು ಅಂದರೆ ಸಾಮಾನ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ / ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ. ಪರಿಶಿಷ್ಟ ಜಾತಿ ವರ್ಗದವರಿಗೆ (SC)ಒಟ್ಟು ಅನುದಾನದ ಕನಿಷ್ಟ ಶೇ.16.25% ರಷ್ಟು ಮೀಸಲಿಡಬೇಕು. ಪರಿಶಿಷ್ಟ ಪಂಗಡದವರಿಗೆ (ST)ಒಟ್ಟು ಅನುದಾದ ಕನಿಷ್ಟ ಶೇ.6.55% ರಷ್ಟು ಮೀಸಲಿಡಬೇಕು. ಸಣ್ಣ, ಅತೀ ಸಣ್ಣ ರೈತರು ಮತ್ತು ರೈತ ಮಹಿಳೆಯರಿಗೆ ಕನಿಷ್ಟ ಶೇ. 33% ರಷ್ಟ ಅನುದಾನ ಮೀಸಲಿಡಬೇಕು.
- ಸದರಿ ಘಟಕಗಳು ಈ ಮೇಲೆ ತಿಳಿಸಿರುವಷ್ಟು ಹಳೆಯದಾಗಿರುವ ಬಗ್ಗೆ ರೈತರು Affidavit ನೀಡಬೇಕು ಹಾಗೂ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಧೃಡೀಕರಿಸಿಕೊಳ್ಳಬೇಕು.
- ರೈತರು ನಿರ್ಮಿಸಿರುವ ಹಸಿರುಮನೆ **ವಿಸ್ತೀರ್ಣಕ್ಕೆ ಅನುಗುಣವಾಗಿ ಸಹಾಯಧನವನ್ನು ಪ್ರತಿ ಚದರ ಮೀಟರ್‌ಗೆ <u>ರೂ.50/- ರಂತೆ ಲೆಕ್ಕಚಾರಮಾಡುವುದು,</u> ಬಟವಾಡೆ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ.** (ಗರಿಷ್ಠ ವಿಸ್ತಾರದ ಮಿತಿಗೊಳಪಟ್ಟಂತೆ).
- ಈ ಯೋಜನೆಯಡಿ ಯಾವುದೇ ಸಹಾಯಧನವನ್ನು ಫಲಾನುಭವಿಗೆ ವಿತರಿಸುವಾಗ ಹಳೆ ಗಿಡಗಳನ್ನು ಬದಲಿಸುವ ಪೂರ್ವದ ಮತ್ತು ಬದಲಿಸಿದ ನಂತರದ ಎರಡೂ ಹಂತಗಳಲ್ಲಿನ ಫಲಾನುಭವಿ ಸಹಿತ ಹಸಿರು ಮನೆಯ ಒಳಾಂಗಣ ಮತ್ತು ಹೊರಾಂಗಣದ ಛಾಯಾಚಿತ್ರಗಳನ್ನು ಸ್ಪಷ್ಟವಾಗಿ ತೆಗೆದ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು
- ಹಸಿರುಮನೆಯನ್ನು ನಿರ್ಮಿಸಿದ ಪ್ರಾರಂಭದಲ್ಲಿ, ಸದರಿ ಘಟಕಕ್ಕೆ ಸಹಾಯಧನ ಪಡೆದಿರುವ ಇಲಾಖೆ/ ಸಂಸ್ಥೆ, ಯೋಜನೆಯ ಹೆಸರು, ಸಹಾಯಧನ ಪಡೆದಿರುವ ವಿಸ್ತೀರ್ಣ, ಘಟಕಗಳು ಮತ್ತು ಮೊತ್ತದ ವಿವರಗಳನ್ನು ಸರಿಯಾಗಿ ನಮೂದಿಸಿರಬೇಕು.
- ಘಟಕ ಸ್ಥಾಪನೆಗಾಗಿ ಸಾಲ ಪಡೆದಿದ್ದ ಪಕ್ಷದಲ್ಲಿ ಸಹಾಯಧನವನ್ನು ECS ಮುಖಾಂತರ back ended subsidyಯಾಗಿ ಹಣಕಾಸಿನ ಸಂಸ್ಥೆ/ ಬ್ಯಾಂಕಿನಲ್ಲಿ ಪಡೆದ ಸಾಲದ ಖಾತೆಗೆ ಜಮೆ ಮಾಡುವುದು.
- ಖರೀದಿ ಮಾಡಿರುವ ತಳಿಗಳ ಹೆಸರು, ಸಂಸ್ಥೆಯ ವಿವರ, ಗಿಡಗಳ ಸಂಖ್ಯೆಯ ವಿವರಗಳಿಗೆ ಸಹಾಯಕ ತೋಟಗಾರಿಕೆ ನಿರ್ದೇಶಕರು /ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ತೋಟಗಾರಿಕೆ ಉಪ ನಿರ್ದೇಶಕರುರವರು ಬಿಲ್ಲಿನಲ್ಲಿ ದೃಢೀಕರಿಸಿರಬೇಕು.
- NHB ಮತ್ತು ತೋಟಗಾರಿಕೆ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಇತರೆ ಯೋಜನೆಗಳಡಿ ಸಹಾಯಧನ ಪಡೆಯದಿರುವ ಬಗ್ಗೆ NOC ನೀಡಬೇಕು.

ಫಲಾನುಭವಿಗಳನ್ನು ಆಯ್ಕೆ ಮಾಡಲು , ಈ ಕೆಳಗೆ ನಮೂದಿಸಿರುವ ಅಧಿಕಾರಿಗಳ ಸಮಿತಿ ರಚಿಸಿ, ಸದರಿ ಸಮಿತಿಯ **<u>ಸದಸ್ಯರ ಸ್ಥಳ ಪರಿಶೀಲನಾ ಮತ್ತು ಶಿಫಾರಸ್ಸು ಪತ್ರ ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕು</u>**

- ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) - ಅಧ್ಯಕ್ಷರು
- ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರು -ಸದಸ್ಯರು.
- ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ - ಸದಸ್ಯರು
- ಜಿಲ್ಲೆಯಲ್ಲಿನ / ಜಿಲ್ಲೆಗೆ ಸಂಬಂಧಿಸಿದ KVK/ IIHR/UAS/UHSನ (ಯಾರಲ್ಲಾದರು ಒಬ್ಬರು.) - ಸದಸ್ಯರು
- ಸೌತ ಇಂಡಿಯನ್ ಫ್ಲೋರಿಕಲ್ಚರ್ ಅಸೋಸಿಯೇಷನ್ (SIFA) (ಪ್ರತಿನಿಧಿ) -ಸದಸ್ಯರು

**ಆ.ಹಸಿರು ಮನೆಗಳ polythene sheet ಗಳ ಬದಲಾವಣೆಗೆ ಸಹಾಯಧನ:**

- ಫಲಾನುಭವಿಗಳು ರೈತರಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ, ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ,ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು. ಹಾಗೂ ಒಪ್ಪಿಗೆ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
- ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
- **ರೈತರು ನಿರ್ಮಿಸಿರುವ ಹಸಿರುಮನೆ ವಿಸ್ತೀರ್ಣಕ್ಕೆ ಅನುಗುಣವಾಗಿ ಸಹಾಯಧನವನ್ನು ಪ್ರತಿ ಚದರ ಮೀಟರ್‌ಗೆ ರೂ.30/- ರಂತೆ ಲೆಕ್ಕಚಾರ ಮಾಡುವುದು ಬಟವಾಡೆ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ.**
- ಈ ಯೋಜನೆಯಡಿ ಯಾವುದೇ ಸಹಾಯಧನವನ್ನು ಫಲಾನುಭವಿಗೆ ವಿತರಿಸುವಾಗ ಹಳೆ ಪಾಲಿಥೀನ್ ಶೀಟ್ ಬದಲಿಸುವ ಪೂರ್ವದಲ್ಲಿ ಹಾಗೂ ನಂತರದ ಎರಡೂ ಹಂತಗಳಲ್ಲಿ ಫಲಾನುಭವಿ ಸಹಿತ ಹಸಿರು ಮನೆಗಳ ಛಾಯಾಚಿತ್ರಗಳನ್ನು ನಾಲ್ಕು ದಿಕ್ಕುಗಳಿಂದ ಕಾಣಿಸುವಂತೆ ತೆಗೆದು, ಹೊದಿಸಿದ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು ,
- ಹಸಿರುಮನೆಯನ್ನು ಕಟ್ಟಿದ ವರ್ಷದಲ್ಲಿ ಸದರಿ ಘಟಕಕ್ಕೆ ಸಹಾಯಧನ ಪಡೆದಿರುವ ಇಲಾಖೆ / ಸಂಸ್ಥೆ, ಯೋಜನೆಯ ಹೆಸರು, ಸಹಾಯಧನ ಪಡೆದಿರುವ ವಿಸ್ತೀರ್ಣ, ಘಟಕಗಳ ಸಂಖ್ಯೆ (Unit) ಮತ್ತು ಮೊತ್ತದ ವಿವರಗಳನ್ನು ಸರಿಯಾಗಿ ನಮೂದಿಸಬೇಕು.
- ಘಟಕ ಸ್ಥಾಪನೆಗಾಗಿ ಸಾಲ ಪಡೆದಿದ್ದ ಪಕ್ಷದಲ್ಲಿ ಸಹಾಯಧನವನ್ನು **ECS ಮುಖಾಂತರ** back ended subsidyಯಾಗಿ ಹಣಕಾಸಿನ ಸಂಸ್ಥೆ/ ಬ್ಯಾಂಕಿನಲ್ಲಿ ಪಡೆದ ಸಾಲದ ಖಾತೆಗೆ ಜಮೆ ಮಾಡುವುದು.
- NHB ಮತ್ತು ತೋಟಗಾರಿಕೆ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಇತರೆ ಯೋಜನೆಗಳಡಿ ಸಹಾಯಧನ ಪಡೆಯದಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ NOC ಪಡೆಯುವುದು.
- ಫಲಾನುಭವಿಗಳನ್ನು ಆಯ್ಕೆ ಮಾಡಲು , ಈ ಕೆಳಗೆ ನಮೂದಿಸಿರುವ ಅಧಿಕಾರಿಗಳ ಸಮಿತಿ ರಚಿಸಿ, ಸದರಿ ಸಮಿತಿಯ ಸದಸ್ಯರ ಅನುಮೋಧನೆ ಪಡೆಯಬೇಕು.

1 ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) - ಅಧ್ಯಕ್ಷರು
2. ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರು -ಸದಸ್ಯರು.
3 ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ - ಸದಸ್ಯರು
4 ಜಿಲ್ಲೆಯಲ್ಲಿನ / ಜಿಲ್ಲೆಗೆ ಸಂಬಂಧಿಸಿದ KVK/ IIHR/UAS/UHSನ (ಯಾರಲ್ಲಾದರು ಒಬ್ಬರು.) - ಸದಸ್ಯರು
5 ಸೌತ ಇಂಡಿಯನ್ ಫ್ಲೋರಿಕಲ್ಚರ್ ಅಸೋಸಿಯೇಷನ್ (SIFA) (ಪ್ರತಿನಿಧಿ) -ಸದಸ್ಯರು

**ಇ. ಹೈಟೆಕ್ ಪುಷ್ಪ ಬೆಳೆಗಾರರು ನಿರ್ಮಿಸಿರುವ ಶೀಥಲ ಗೃಹಗಳಿಗೆ ಬಳಸುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.2ರತೆ ಸಹಾಯಧನ:**

- ಪ್ರತಿ ಘಟಕಕ್ಕೆ ಸಂಬಂಧಿಸಿದಂತೆ ಸಹಾಯಕ ತೋಟಗಾರಿಕೆ ಅಧಿಕಾರಿ (RSK)ರವರು ಕಡ್ಡಾಯವಾಗಿ ಶೇ.100 ರಷ್ಟು ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್) ಅಥವಾ ಸಹಾಯ ತೋಟಗಾರಿಕೆ ಅಧಿಕಾರಿ ರವರು ಪ್ರತಿ ಮಾಹೆ ತಪ್ಪದೇ ಇಂತಹ ಶೀತಲಗೃಹಗಳಿಗೆ ಭೇಟಿ ನೀಡಿ ಮೇಲೆ ತಿಳಿಸಿರುವ ಹೂಗಳನ್ನು ಶೇಖರಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಪರಿಶೀಲಿಸಿದ ಬಗ್ಗೆ ಪ್ರತ್ಯೇಕ ವಹಿಯಲ್ಲಿ ನಮೂದಿಸತಕ್ಕದ್ದು. ತೋಟಗಾರಿಕೆ ಉಪ ನಿರ್ದೇಶಕರುರವರು ವರ್ಷಕ್ಕೆ ಕನಿಷ್ಠ 3 ಬಾರಿ ಭೇಟಿ ನೀಡಿ ಪರಿಶೀಲಿಸತಕ್ಕದ್ದು.
- ಸಹಾಯಧನ ಪಡೆಯಲಿಚ್ಛಿಸುವ ಇಂತಹ ಶೀತಲಗೃಹಗಳ ಮಾಲೀಕರು ಅನುಬಂಧ-4 ರ ಮಾಹಿತಿಯನ್ನು ವಿದ್ಯುತ್ ಪ್ರಸರಣಾ ನಿಗಮಕ್ಕೆ ಪಾವತಿಸಿದ ಬಿಲ್ಲುಗಳ ಜೊತೆಗೆ ಸಹಾಯಧನಕ್ಕಾಗಿ ಸಲ್ಲಿಸತಕ್ಕದ್ದು.
- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್), ಸಹಾಯಕ ತೋಟಗಾರಿಕೆ ನಿರ್ದೇಶಕರು ರವರು ಶೀತಲ ಗೃಹಗಳ ಮಾಲೀಕರಿಂದ ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ಪಡೆದು ವಿದ್ಯುತ್ ಬಿಲ್ಲು ಮತ್ತು ಅಗತ್ಯ ದಾಖಲೆಗಳೊಂದಿಗೆ ಡಿ.ಸಿ ಬಿಲ್ಲುಗಳನ್ನು ತಯಾರಿಸಿ ಮೇಲು ಸಹಿಗಾಗಿ ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ರವರಿಗೆ ಸಲ್ಲಿಸತಕ್ಕದ್ದು.
- 2014-15 ನೇ ಸಾಲಿನಲ್ಲಿ ಒದಗಿಸಿರುವ ಅನುಧಾನವನ್ನು ಏಪ್ರಿಲ್ 2014 ರ ಮಾಹೆಯಿಂದ ಬಿಲ್ಲುಗಳನ್ನು ಪಾವತಿಸಲು ಕ್ರಮ ಕೈಗೊಳ್ಳುವುದು.
- ವಾಣಿಜ್ಯ ಪುಷ್ಪಗಳನ್ನು ಹಸಿರುಮನೆಯಲ್ಲಿ ಉನ್ನತ ತಂತ್ರಜ್ಞಾನವನ್ನು ಅಳವಡಿಸಕೊಂಡು ಕಳೆದ ವರ್ಷಗಳಿಂದ ಪುಷ್ಪ ಕೃಷಿಯನ್ನು ಮಾಡುತ್ತಿರುವಇಂತಹ ರೈತರು/ಸಂಸ್ಥೆಗಳು ಹೊಂದಿರುವ ಹೂ ಶೇಖರಣಾ ಶೀಥಲಗೃಹಳಿಗೆ ಮಾತ್ರ ಸಹಾಯಧನವನ್ನು ನೀಡುವುದು.
- ಸದರಿ ಶೀಥಲ ಗೃಹಗಳಲ್ಲಿ ಹಸಿರುಮನೆಯಲ್ಲಿ ಬೆಳೆಯುವಂತಹ ವಾಣಿಜ್ಯ ಪುಷ್ಪ ಕೃಷಿಗಳನ್ನು ಶೇಖರಿಸುತ್ತಿರುವ ಬಗ್ಗೆ ರೈತರಿದ Affidavit ನ್ನು ಪಡೆಯಬೇಕು ಹಾಗೂ ಅಧಿಕಾರಿಗಳು ಇದನ್ನು ಮರು ಪರಿಶೀಲಿಸಿ ದೃಢೀಕರಿಸಿಕೊಳ್ಳಬೇಕು.

**8. ಅರ್ಜಿಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:-**

- ಸಂಬಂಧಪಟ್ಟ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು **"ಹೂ ಕೃಷಿಗೆ ಉತ್ತೇಜನಾ"** ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿ ಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳಿಯ ಮಾಧ್ಯಮಗಳು, ಪತ್ರಿಕೆಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಅಹ್ವಾನಿಸುವುದು.
- ಪ್ರಕಟಣೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು.
- ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಮೊದಲಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ/ಸತೋನಿ ಕಛೇರಿಗೆ ಸಲ್ಲಿಸುವುದು.

- ನಿಗಧಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ (ನಮೂನೆ).
- ಹಸಿರು ಮನೆಯಲ್ಲಿ ಹಳೆ ಗಿಡಗಳನ್ನು ಬದಲಿಸಿ ಹೊಸ ಗಿಡಗಳನ್ನು ನೆಡಲು ಹಾಗೂ ಹಳೆಯ ಪಾಲಿಥೀನ್ ಶೀಟ್ ಹಾಳಾಗಿದ್ದಲ್ಲಿ ಹೊಸ ಪಾಲಿಥೀನ್ ಶೀಟ್‌ನ ಬದಲಾವಣೆ ಮಾಡಲು ಉದ್ದೇಶಿಸಿದ ಜಮೀನಿನ ಪಹಣಿ (RTC) (ಹಸಿರು ಮನೆಯಲ್ಲಿನ ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು).
- Leased land ಪರಿಗಣಿಸುವುದಿಲ್ಲ.
- ಯಾವುದಾರರು ಹಣಕಾಸಿನ ಸಂಸ್ಥೆ/ ಬ್ಯಾಂಕಿನಲ್ಲಿ ಸಾಲ ಪಡೆದಿದ್ದ ಪಕ್ಷದಲ್ಲಿ, ಬ್ಯಾಂಕ್ ಸಾಲದ ಖಾತೆಯ ವಿವರಗಳು.
- ರೈತರಿಗೆ ಖಾತೆ ಹೊಂದಿರುವ ಬ್ಯಾಂಕ್ ನ ಹೆಸರು, ಖಾತೆ ಸಂಖ್ಯೆಯ ವಿವರಗಳು ಒದಗಿಸುವುದು.
- Self attested ಭಾವಚಿತ್ರಗಳು.

➢ ತಾಲ್ಲೂಕು ಹಿಸತೋನಿ/ಸತೋನಿ ರವರು ಅರ್ಜಿ ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ ಒಂದು ವಾರದ ಒಳಗಾಗಿ ಸಹಾಯಧನ ಅರ್ಜಿಯನ್ನು ತೋಉನಿ(ಜಿಪಂ) ರವರಿಗೆ ಎಲ್ಲಾ ದಾಖಲಾತಿಗಳ ಸಹಿತ ಕಳುಹಿಸುವುದು.ತೋಟಗಾರಿಕೆ ಉಪ-ನಿರ್ದೇಶಕರು (ಜಿ. ಪಂ) ರವರು ಜಿಲ್ಲೆಯ ಎಲ್ಲಾ ಹಿಸತೋನಿ/ಸತೋನಿ ರವರಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ ನಿಗಧಿತ ಆರ್ಥಿಕ / ಭೌತಿಕ ಗುರಿಗಳಿಗೆ ಅನುಗುಣವಾಗಿ ತಾಲ್ಲೂಕುವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವುದು.

➢ ಜಿಲ್ಲೆಯ ತೋಉನಿ (ಜಿಪಂ) ರವರು ಅರ್ಜಿಯನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅನುಮೋದಿತ ಕ್ರಿಯಾ ಯೋಜನೆಯ ಅನುದಾನದ ಮಿತಿಯಲ್ಲಿ ಫಲಾನುಭವಿಗೆ work Order/letter of intent ಅನ್ನು ಒಂದು ವಾರದ ಒಳಗಾಗಿ ನೀಡುವುದು.

➢ ತೋಉನಿ (ಜಿ. ಪಂ) ರವರಿಂದ work order/letter of intent ಪಡೆದ ದಿನಾಂಕದಿಂದ ರೈತರು ಕಾರ್ಯಕ್ರಮದ ಮಾರ್ಗಸೂಚಿ ಪ್ರಕಾರ ಹೊಸ ಗಿಡಗಳನ್ನು ನೆಡವುದು ಹಾಗೂ ಪಾಲಿಥೀನ್ ಶೀಟ್‌ಗಳ ಬದಲಾವಣೆಗಳನ್ನು 30 ದಿನಗಳೊಳಗಾಗಿ ತಮ್ಮ ಜಮೀನಿನಲ್ಲಿ ಪೂರ್ಣಗೊಳಿಸಿ ಅಗತ್ಯ ಈ ಕೆಳಕಂಡ ದಾಖಲೆಗಳ ಸಹಿತ ಸಂಬಂಧಪಟ್ಟ ಹೋಬಳಿಯ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ (RSK)ರವರಿಗೆ ಸಲ್ಲಿಸುವುದು.

1. ಹಸಿರು ಮನೆಯಲ್ಲಿ ಹಳೆ ಗಿಡಗಳನ್ನು ಬದಲಿಸಿ ಹೊಸ ಗಿಡಗಳನ್ನು ನೆಡಲು ಹಾಗೂ ಹಳೆಯ ಪಾಲಿಥೀನ್ ಶೀಟ್ ಹಳಾಗಿದ್ದಲ್ಲಿ ಹೊಸ ಪಾಲಿಥೀನ್ ಶೀಟ್‌ನ ಬದಲಾವಣೆ ಪೂರ್ವ, ನಿರ್ಮಾಣ ಹಂತದ ಮತ್ತು ಸಂಪೂರ್ಣಗೊಂಡ ನಂತರದಲ್ಲಿ ಬೆಳೆ ಹಾಗೂ ಬಿಲ್ಲಿನಲ್ಲಿ ನಮೂದಿಸಿರುವ ಮುಖ್ಯ ಕಾಮಗಾರಿಗಳಾದ Polysheet Replacement ಮತ್ತು ಗಿಡಗಳ ಬದಲಾವಣೆ ಕಾಣುವಂತೆ ವಿವಿಧ ಕೋನಗಳಲ್ಲಿ ತೆಗೆದ GPS enabled ಛಾಯಾ ಚಿತ್ರಗಳು ಫಲಾನೂಭವಿಗಳು ಮತ್ತು ಅಧಿಕಾರಿಗಳ ಸಮೇತ.
2. ಹಸಿರು ಮನೆಯಲ್ಲಿ ಹಳೆಯ ಅನುತ್ಪಾದಕ ಗಿಡಗಳನ್ನು ಬದಲಿಸಿ ಹೊಸ ಗಿಡಗಳನ್ನು ನೆಡಲು ಹಾಗೂ ಹಳೆಯ ಪಾಲಿಥೀನ್ ಶೀಟ್ ಹಾಳಾಗಿದ್ದಲ್ಲಿ ಹೊಸ ಪಾಲಿಥೀನ್ ಶೀಟ್‌ನ ಬದಲಾವಣೆಗೆ ಸಂಬಂಧಿಸಿದ ಸಂಪೂರ್ಣ VAT ಸಂಖ್ಯೆ/ಮಾರಾಟ ತೆರಿಗೆ ಸಂಖ್ಯೆ ನಮೂದಿಸಿರುವ ಮೂಲ ಬಿಲ್ಲುಗಳು.
3. ಹಸಿರು ಮನೆಯಲ್ಲಿ ಹಳೆ ಗಿಡಗಳನ್ನು ಬದಲಿಸಿ ಹೊಸ ಗಿಡಗಳನ್ನು ನೆಡಲು ಹಾಗೂ ಹಳೆಯ ಪಾಲಿಥೀನ್ ಶೀಟ್ ಹಳಾಗಿದ್ದಲ್ಲಿ ಹೊಸ ಪಾಲಿಥೀನ್ ಶೀಟ್‌ಗಳ ಬದಲಾವಣೆ ನಂತರ ಹಸಿರು ಮನೆ ಘಟಕದ ಸದ್ಬಳಕೆ

ಮಾಡಿಕೊಳ್ಳುವ ಬಗ್ಗೆ ನಿಗಧಿತ ನಮೂನೆಯಲ್ಲಿ ರೂ.100/- ಛಾಪಾ ಕಾಗದದಲ್ಲಿ ರೈತ ಫಲಾನುಭವಿಗಳಿಂದ ಸ್ವಯಂ ದೃಢೀಕರಣ ಪತ್ರ.(AFFIDAVIT)

4 ಸಂಬಂಧಸಿದ ಸಹಾಯಕತೋಟಗಾರಿಕೆಅಧಿಕಾರಿ(RSK)ರವರುಫಲಾನುಭವಿಯೊಂದಿಗೆ ತಾಕುಗಳನ್ನು ಪರಿಶೀಲಿಸಿ, ಹಸಿರು ಮನೆಯಲ್ಲಿ ಹಳೆ ಗಿಡಗಳನ್ನು ಬದಲಿಸಿ ಹೊಸ ಗಿಡಗಳನ್ನು ನೆಡಲು ಹಾಗೂ ಹಳೆಯ ಪಾಲಿಥೀನ್ ಶೀಟ್ ಹಳಾಗಿದ್ದಲ್ಲಿ ಹೊಸ ಪಾಲಿಥೀನ್ ಶೀಟ್‌ಗಳನ್ನು ಬದಲಾಯಿಸಿರುವುದು ಮಾರ್ಗಸೂಚಿ ಪ್ರಕಾರ ತಾಂತ್ರಿಕ ವೈಶಿಷ್ಟತೆಯುಳ್ಳ ಪರಿಕರಗಳ ಉಪಯೋಗಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಿ ತೃಪ್ತಿಕರವಾಗಿದ್ದಲ್ಲಿ, ಹೂಗಿಡಗಳನ್ನು ನಾಟಿಮಾಡಿದನಂತರ ಹಾಗೂ ಪಾಲಿಥೀನ್ ಶೀಟ್ ಬದಲಾಯಿಸಿದ ನಂತರ ಫಲಾನುಭವಿಗಳ ಸಮೇತ ಫೋಟೊ ತೆಗೆದು ಫೋಟೊ ಹಾಗೂ ವರಧಿಯನ್ನುಸತೋಅ(RSK) ಹಾಗೂ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೃಢೀಕರಣದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿ. ಪಂ) ರವರಿಗೆ ಒಂದು ವಾರದ ಅವಧಿಯಲ್ಲಿ ಸಲ್ಲಿಸುವುದು .

**<u>ವಿವಿಧ ಹಂತದ ಅಧಿಕಾರಿಗಳಿಂದ ಘಟಕ ಪರಿಶೀಲನೆ ವಿವರ:</u>**

ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ (ಶೇ.100 ರಷ್ಟು) ತಾಕು ಪರಿಶೀಲನೆ ನಡೆಸಬೇಕು.

ಸತೋಅ (RSK) ರವರು ಪರಿಶೀಲಿಸಿದ ತಾಕುಗಳ ಪೈಕಿ ಕನಿಷ್ಟ ಶೇ.100 ರಷ್ಟು ತಾಕುಗಳನ್ನು ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಬೇಕು.

ಸತೋಅ (RSK) ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು.

ತಾಲ್ಲೂಕು ಅಧಿಕಾರಿಗಳಿಂದ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ತೋಉನಿ (ಜಿಪಂ)ಮತ್ತು ತಾಂತ್ರಿಕ ಸಮಿತಿರವರೊಂದಿಗೆ ಶೇ.100 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು.

ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಸತೋನಿ/ಹಿಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರಧಿ ಸಲ್ಲಿಸುವುದು. ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ/ ತಾಕು ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ GPS enabled photos ಅನ್ನು ತೆಗೆದು ಇಲಾಖೆಯ websiteನಲ್ಲಿ upload ಮಾಡುವುದು.

ರೈತರು ಬೆಳೆಯನ್ನು ಪಹಣಿಯಲ್ಲಿ ನಮೂದಿಸದೆ ಇರುವ ಪಕ್ಷದಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿ (RSK)/ ಗ್ರಾಮ ಲೆಕ್ಕಾಧಿಕಾರಿಯವರಿಂದ ಬೆಳೆಯನ್ನು ಧೃಢೀಕರಿಸಿದ ಅರ್ಜಿಗಳನ್ನು ಸಹಾಯಧನ ಲೆಕ್ಕಾಚಾರ ಮಾಡಲು ಪರಿಗಣಿಸುವುದು.

**9 ತಾಂತ್ರಿಕ ಪರಿಶೀಲನಾ ಕ್ರಮಗಳು:-**

ತಾಕು ಪರಿಶೀಲನೆ ಸಮಯದಲ್ಲಿ ಅನುಷ್ಠನಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.

- ಉಪಯೋಗಿಸಲಾದ ಪರಿಕರಗಳ(ಗಿಡ/ಪಾಲಿಥೀನ್‌ಶೀಟ್)ತಾಂತ್ರಿಕ ವಿಶಿಷ್ಟತೆ
- ಗುಣಮಟ್ಟ
- ಪರಿಮಾಣ ಬಗ್ಗೆ ಸತೋಅ, ಸತೋನಿ/ಹಿಸತೋನಿ, ತೋಉನಿ ರವರು ಪರಿಶೀಲಿಸುವುದು.
- ತೋಟಗಾರಿಕೆ ಉಪ ನಿರ್ದೇಶಕರು ಮೇಲ್ಕಂಡ ಅಂಶಗಳನ್ನು ಮತ್ತು ದಾಖಲಾತಿಗಳನ್ನು ಪರಿಶೀಲಿಸಿ ನಿರ್ದೇಶನಾಲಯದ ಅನುಮೋದನೆ ಪಡೆಯತಕ್ಕದ್ದು.

**10 <u>ನಿರ್ದೇಶನಾಲಯದ ಅನುಮೋದನೆ:</u>**

ಸಂಬಂಧಪಟ್ಟ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರುಗಳು ಪ್ರತಿಯೊಂದು ದಾಖಲಾತಿಗಳನ್ನು ದೃಢೀಕರಿಸಿ ನಿಖರವಾದ ಸಹಾಯಧನವನ್ನು ಲೆಕ್ಕಚಾರ ಹಾಕಿ ಶಿಫಾರಸ್ಸಿನೊಂದಿಗೆ ಈ ಕೆಳ ಕಾಣಿಸಿದ **ದಾಖಲಾತಿಗಳೊಂದಿಗೆ ನಿರ್ದೇಶನಾಲಯದ ಮಂಜೂರಾತಿಗಾಗಿ ಸಲ್ಲಿಸುವುದು**.

ಅರ್ಹತೆ ಹೊಂದಿಲ್ಲದ, ನಿಗಧಿ ಪಡಿಸಿದ ಸಮಯದ ನಂತರ ವಿಳಂಬವಾಗಿ ಅಥವಾ ಅಪೂರ್ಣ ಪ್ರಸ್ತಾವನೆಗಳನ್ನು ಸಲ್ಲಿಸಿದ್ದಲ್ಲಿ, ಸಂಬಂಧಪಟ್ಟ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರುಗಳು ಮತ್ತು ಕೇಂದ್ರ ಕಛೇರಿ ಸಹಾಯಕರುಗಳ ನೇರ ಜವಬ್ದಾರರಾಗಿರುತ್ತಾರೆ.

1 ಸಹಾಯಧನಕ್ಕಾಗಿ ಅರ್ಜಿದಾರರು ಸಲ್ಲಿಸಿರುವ ಭರ್ತಿ ಮಾಡಿದ ಅರ್ಜಿ ನಮೂನೆ (Annexure - 1).

2. ಹಸಿರು ಮನೆಯಲ್ಲಿ ಹಳೆಯ ಅನುತ್ಪಾದಕ ಗಿಡಗಳನ್ನು ಬದಲಿಸಿ ಹೊಸ ಗಿಡಗಳನ್ನು ನೆಡಲು ಹಾಗೂ ಹಳೆಯ ಪಾಲಿಥೀನ್ ಶೀಟ್ ಹಾಳಾಗಿದ್ದಲ್ಲಿ ಹೊಸ ಪಾಲಿಥೀನ್ ಶೀಟ್‌ನ ಬದಲಾವಣೆ ಮಾಡಲು ಉದ್ದೇಶಿಸಿದ ಜಮೀನಿನ ಪಹಣಿ (RTC) (ಹಸಿರು ಮನೆಯಲ್ಲಿನ ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು).

3. ಜಿಲ್ಲೆಯ ಉಪ ನಿರ್ದೇಶಕರಿಂದ (ಜಿಪಂ)ನೀಡಲ್ಪಟ್ಟಿರುವ ಆಶಯ ಪತ್ರದ ಪ್ರತಿ (Copy of letter of intent).

4. ಜಂಟಿ ಸಮಿತಿಯ ಸ್ಥಳಪರಿಶೀಲನಾ ಶಿಫಾರಸ್ಸು ಪ್ರತಿ. (Annexure - 2).

5. ಹಸಿರು ಮನೆಯಲ್ಲಿ ಹಳೆಯ ಅನುತ್ಪಾದಕ ಗಿಡಗಳನ್ನು ಬದಲಿಸಿ ಹೊಸ ಗಿಡಗಳನ್ನು ನೆಡಲು ಹಾಗೂ ಹಳೆಯ ಪಾಲಿಥೀನ್ ಶೀಟ್ ಹಾಳಾಗಿದ್ದಲ್ಲಿ ಹೊಸ ಪಾಲಿಥೀನ್ ಶೀಟ್‌ನ ಬದಲಾವಣೆಗೆ ಸಂಬಂಧಿಸಿದ ಸಂಪೂರ್ಣ VAT ಸಂಖ್ಯೆ/ಮಾರಾಟ ತೆರಿಗೆ ಸಂಖ್ಯೆ ನಮೂದಿಸಿರುವ ಮೂಲ ಬಿಲ್ಲುಗಳು.

6. ರೈತರಿಂದ ಪಡೆಯಬೇಕಾದ ದೃಢೀಕರಣ

7.ಇಲಾಖಾ ಅಧಿಕಾರಿಗಳು ಫಲಾನುಭವಿಗಳೊಂದಿಗೆ ಘಟಕ ನಿರ್ಮಾಣ ಪೂರ್ವ ಮತ್ತು ನಿರ್ಮಾಣ ನಂತರ ತೆಗೆದ ಛಾಯಚಿತ್ರ.**<u>ತಾಂತ್ರಿಕ ಸಮಿತಿ ತಂಡದ ಪರಿಶೀಲನಾ ವರದಿ</u>**

**11.ಸಹಾಯಧನ ವಿತರಣೆ:**

1 ಆಯಾ ಜಿಲ್ಲೆಯ ತೋಉನಿ(ಜಿ.ಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ತಾಲ್ಲೂಕು ಸತೋನಿ/ಹಿಸತೋನಿ (ಜಿಪಂ )ನೀಡಿರುವ ಅನುಷ್ಠಾನದ ವರದಿಯನ್ನು ಪರಿಶೀಲಿಸಿ, ನಿರ್ದೇಶನಾಲಯದ ಮಂಜೂರಾತಿ ನಂತರ ಕೆಲಸವು ತೃಪ್ತಿಕರವಾಗಿದಲ್ಲಿ ಮಾತ್ರ ಸಹಾಯಧನ ಮೊತ್ತವನ್ನು ECS ಮೂಖಾಂತರ ಫಲಾಣುಭವಿಯ ಬ್ಯಾಂಕ್ ಖಾತೆಗೆ ಅಥವಾ ಬ್ಯಾಂಕ್ ಸಾಲ ಪಡೆದಿದ್ದಲ್ಲಿ ಬ್ಯಾಂಕ್ ಖಾತೆಗೆ ಜಮಾ ಮಾಡುವುದು. ಯಾವುದೇ ಕಾರಣಕ್ಕೂ ಪರಿಕರಗಳ ಸರಬರಾಜುದಾರರಿಗೆ ಸಹಾಯಧನ ಬಿಡುಗಡೆ ಮಾಡುವಂತಿಲ್ಲ.

**12.ಅನುಷ್ಠಾನ ವೇಳಾಪಟ್ಟಿ:**

- ಆಯಾ ಜಿಲ್ಲೆಯ ಅನುಮೋದಿತ ಕಿಯಾ ಯೋಜನೆ ಮೀಸಲಾತಿ ಹಾಗೂ ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾಪಟ್ಟಿ (MPIC)ನಂತೆ ಆಯಾ ಘಟಕಗಳಿಗೆ ನಿಗದಿಯಾಗಿರುವ ಅನುದಾನ ಮೀರದಂತೆ ಅನುದಾನ

ಯೋಜನೆಯನ್ನು ಅನುಷ್ಠಾನಗೊಳಿಸುವುದು. ಫಲಾನುಭವಿ ತಮ್ಮ ಕ್ಷೇತ್ರದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಿದ 30 ದಿನಗಳ ಒಳಗಾಗಿ ಸಹಾಯಧನವನ್ನು ಫಲಾನುಭವಿ ಖಾತೆ / ಸಾಲದ ಖಾತೆಗೆ ಜಮಾ ಮಾಡತಕ್ಕದ್ದು. ಈ ಬಗ್ಗೆ ಸಂಬಂಧಿಸಿದ ಸತೋನಿ/ಹಿಸತೋನಿ ಹಾಗೂ ತೋಉನಿ(ಜಿಪಂ) ರವರು ವೈಯುಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

**13.ಅನುಬಂಧಗಳು:**

1. ಕ್ರಿಯಾ ಯೋಜನೆ-2014-15(ಜಿಲ್ಲಾವಾರು)
2. ಪ್ರತಿ ಮಾಹೆಯ ಪ್ರಗತಿ ವರಧಿ ಸಲ್ಲಿಸುವ ನಮೂನೆ:
3. ಅನುಷ್ಠಾನದ ವೇಳಾ ಪಟ್ಟಿ
4. ಸಹಾಯಧನಕ್ಕಾಗಿ ಅರ್ಜಿದಾರರು ಸಲ್ಲಿಸಬೇಕಾದ ಅರ್ಜಿ ನಮೂನೆ
5. ಇಲಾಖಾ ಅಧಿಕಾರಿಗಳಿಂದ ಘಟಕ ಪರಿಶೀಲನಾ ದೃಡೀಕರಣ (ನಮೂನೆ)

**14. ಆರ್ಥಿಕ ಪ್ರತ್ಯಾ ಯೋಜನೆ (Delegation of Power) :**

ಈ ಯೋಜನೆಯಡಿಪಾಲಿಥೀನ್ ಶೀಟ್ ಬದಲಾಯಿಸಲು ಹಳೆಯ ಗಿಡಗಳನ್ನು ಬದಲಾಯಿಸಲು ತೋಟಗಾರಿಕೆ ನಿರ್ದೇಶನಾಲಯದಿಂದ ಮಂಜೂರಾತಿ ನೀಡಲಾಗುವುದು ಹಾಗೂ ಶೀಥಲಗೃಹಗಳಿಗೆ ಸಹಾಯಧನಕ್ಕೆ ಸಂಬಂಧಿಸಿದ ಜಿಲ್ಲೆಯ ತೋಟಗಾರಿಕೆ ಉಪನಿರ್ದೇಶಕರು ಮಂಜೂರಾತಿ ನೀಡುವುದು.

1.ಸದರಿ ಯೋಜನೆಯನ್ನು ರಾಜ್ಯವಲಯದ **" ಹೂ ಕೃಷಿಗೆ ಉತ್ತೇಜನ"** ಯೋಜನೆ ಲೆಕ್ಕ ಶೀರ್ಷಿಕೆ:2401-00-108-22-55 (ಯೋಜನೆ)ಯ ಉಪ ಶೀರ್ಷಕೆ :100 (ಧನಸಹಾಯ/ಪರಿಹಾರ)ದಡಿ ವೆಚ್ಚ ಭರಿಸುವುದು.

2.ಸದರಿ ಯೋಜನೆಯಡಿ ಫಲಾನುಭವಿಗಳಿಗೆ ನೀಡುವ ಸಹಾಯಧನದ ಮೊತ್ತವನ್ನು ಫಲಾನುಭವಿಯು ಹೊಂದಿರುವ ಬ್ಯಾಂಕ್ ಖಾತೆಗೆ ECS ಮೂಲಕ ವರ್ಗಾಹಿಸುವುದು. ಬ್ಯಾಂಕ್‌ನಿಂದ ಸಾಲ ಪಡೆದಿದ್ದಲ್ಲಿ ಬ್ಯಾಂಕ್ ಸಾಲದ ಖಾತೆಗೆ ಜಮೆ ಮಾಡುವುದು. **ರೈತರಿಗೆ ನೇರವಾಗಿ ನಗದು/ಚೆಕ್ ನೀಡುವಂತಿಲ್ಲ.**

**15. ಅನುಷ್ಠಾನಕ್ಕೊಳಪಡುವ ಪ್ರದೇಶಗಳ ವ್ಯಾಪ್ತಿ:**

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಉನ್ನತ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹಸಿರು ಮನೆಯಲ್ಲಿ ಪುಷ್ಪ ಬೇಸಾಯದಲ್ಲಿ ತೊಡಗಿರುವ ಮತ್ತು ರಫ್ತು ಮಾಡುವಂತಹ ರೈತರಿಗೆ ಸದರಿ ಯೋಜನೆಯ ಸೌಲಭ್ಯವನ್ನು ನೀಡಲು ಮೊದಲ ಪ್ರಾಶಸ್ತ್ಯ ನೀಡುವುದು.

**16. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು.( Reporting and documentation)**

1.ಪ್ರತಿ ಮಾಹೆಯ ಆರ್ಥಿಕ ಮತ್ತು ಭೌತಿಕ ಪ್ರಗತಿ ವರದಿಯನ್ನು ಇಮೇಲ್ ಮೂಲಕ ತಿಂಗಳ 3ನೇ ದಿನಾಂಕದ ಒಳಗಾಗಿ ತಪ್ಪದೇ ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು ಮತ್ತು ಪುಷ್ಪಾಭಿವೃದ್ಧಿ) ರವರಿಗೆ ಸಲ್ಲಿಸುವುದು. (E-mail Id: adfruits@gmail.com ಅಥವಾ adhfloriculture@gmail.com. ಏನಾದರೂ ಸಮಸ್ಯೆ ಇದ್ದಲ್ಲಿ, ಸಹಾಯಕ ತೋಟಗಾರಿಕೆ ನಿರ್ದೇಶಕರು (ಪುಷ್ಪಾಭಿವೃದ್ಧಿ) ರವರನ್ನು ದೂರವಾಣಿ ಸಂಖ್ಯೆ: 080-26573154 ಮುಖಾಂತರ ಸಂಪರ್ಕಿಸುವುದು).

2.ಸದರಿ ಯೋಜನೆಯಡಿ ಸಹಾಯಧನ ಪಡೆದಿರುವ ವಿವರಗಳನ್ನು ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ)/ ಸತೋನಿ (ಜಿಪಂ)ರವರ ಕಛೇರಿಯಲ್ಲಿ ದಾಖಲಾತಿ / ವಹಿಗಳಲ್ಲಿ ನಿರ್ವಹಿಸುವುದು ಮತ್ತು ನಿರ್ದೇಶನಾಲಯಕ್ಕೆ ಅಂತಿಮ ಪಟ್ಟಿ ಸಲ್ಲಿಸುವುದು.

3.ಎಲ್ಲಾ ಫಲಾನುಭವಿಗಳನ್ನೊಳಗೊಂಡ ಜಿಪಿಎಸ್ ಪೋಟ್‌ಗಳನ್ನು ಪ್ರತಿ ತಿಂಗಳ ಅಂತ್ಯದಲ್ಲಿ ತಪ್ಪದೇ http://www.horticulture.kar.nic.in ವೆಬ್‌ಸೈಟ್‌ನಲ್ಲಿ ಅಳವಡಿಸುವುದು. (ಸಮಸ್ಯೆ ಇದ್ದಲ್ಲಿ, ಸಹಾಯಕ ತೋಟಗಾರಿಕೆ ಅಧಿಕಾರಿ (ಯೋಜನೆ ವಿಭಾಗ) ರವರನ್ನು ದೂರವಾಣಿ ಸಂಖ್ಯೆ: 080-26573868 ಮುಖಾಂತರ ಸಂಪರ್ಕಿಸುವುದು).

4.ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು ಮತ್ತು ಪುಷ್ಪಾಭಿವೃದ್ಧಿ) ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಕಳುಹಿಸುವುದು.

***ವಿಶೇಷ ಸೂಚನೆ:*** ರಾಷ್ಟ್ರೀಯ ತೋಟಗಾರಿಕೆ ಮಂಡಳಿ (NHB)ಮತ್ತು ತೋಟಗಾರಿಕೆ ಇಲಾಖೆ ವತಿಯಿಂದ One Time Settlement (OTS)ಕಾರ್ಯಕ್ರಮದಡಿ ಸವಲತ್ತು ಪಡೆದಿರುವ Sick Unit ಗಳು ಸದರಿ ಯೋಜನೆಯಡಿ ಸಹಾಯಧನಕ್ಕಾಗಿ ಪರಿಗಣಿಸುವಂತಿಲ್ಲ ಹಾಗೂ ಸಹಾಯಧನ ಪಡೆಯಲು ಅರ್ಹತೆ ಇರುವುದಿಲ್ಲ.

**ತೋಟಗಾರಿಕೆ ನಿರ್ದೇಶಕರು.**



**ನಮೂನೆ-1**

| | |
|---|---|
| ದಿನಾಂಕ: | ಭಾವಚಿತ್ರ: |
| **ರವರಿಗೆ,**<br>ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕು/ ಸಹಾಯಕ ತೋಟಗಾರಿಕೆ ನಿರ್ದೇಶಕರು,<br>(ಜಿಲ್ಲಾ ಪಂಚಾಯತ್)<br>ತಾಲ್ಲೂಕು:<br>ಜಿಲ್ಲೆ: | |

**2013 -2014 ನೇ ಸಾಲಿನ ರಾಜ್ಯವಲಯದ "ಹೂ ಕೃಷಿಗೆ ಉತ್ತೇಜನ" ಯೋಜನೆಯಡಿ ಹಸಿರು ಮನೆಯಲ್ಲಿ ಹೊಸ ಗಿಡಗಳನ್ನು ನೆಡಲು/ ಹೊಸ ಪಾಲಿಥೀನ್ ಹೊದಿಕೆ ಅಳವಡಿಸುವ ಕಾರ್ಯಕ್ರಮದಡಿ ಸಹಾಯಧನ ಕೋರಿ ಅರ್ಜಿ:**

**ಅ. ಫಲಾನುಭವಿಯ/ ಸಂಸ್ಥೆಯ ವಿವರ:**

| | | | |
|---|---|---|---|
| 1. | ಫಲಾನುಭವಿಯ/ ಸಂಸ್ಥೆಯ ಹೆಸರು: | | |
| 2. | ವಿಳಾಸ: | | |
| 3. | ಲಿಂಗ: | ವಯಸ್ಸು: | ಜಾತಿ: |
| 4. | ಸಂಸ್ಥೆಯಾದಲ್ಲಿ: | | |
| | ನೊಂದಣಿ ಸಂಖ್ಯೆ: | ನೊಂದಾಯಿಸಿದ ದಿನಾಂಕ: | ನೊಂದಾಯಿಸಿದ ಪ್ರಾಧಿಕಾರ: |

**ಆ. ಪ್ರಸ್ತಾವನೆಯ ವಿವರ:**

| | | | | |
|---|---|---|---|---|
| 1. | ಘಟಕದ ಹೆಸರು: | | | |
| 2. | ಸ್ಥಳ: | | | |
| | ಸರ್ವೆ ನಂ: | ಗ್ರಾಮ: | ತಾಲ್ಲೂಕು: | ಜಿಲ್ಲೆ: |
| 4. | ಜಮೀನು ಅರ್ಜಿದಾರರ ಹೆಸರಿನಲ್ಲಿ ಇದೆಯೇ? | | | |
| 4a. | ಇಲ್ಲದಿದ್ದ ಪಕ್ಷದಲ್ಲಿ: | | | |
| | | | | |
| | | | | |

**ಇ. ಘಟಕದ ವಿವರಗಳು :**

| | | |
|---|---|---|
| 1. | ಹಸಿರುಮನೆಯನ್ನು ಸ್ಥಾಪಿಸಿದ ವರ್ಷ: | |
| 2. | ಹಸಿರು ಮನೆಯ ವಿಸ್ತೀರ್ಣ: | ಚ.ಮೀ: |
| 3. | ನಾಟಿ ಮಾಡಿದ ಗಿಡಗಳ ಸಂಖ್ಯೆ: | ತಳಿಗಳು : |
| 4. | ಗಿಡಗಳನ್ನು ಖರೀದಿಸಿದ ಮೂಲ: | |
| 5. | ಬದಲಾಯಿಸಿದ ಪಾಲಿಥೀನ್ ಪ್ರಮಾಣ: | ಚ.ಮೀ : |

**ಈ. ಇತರೆ ವಿವರ:**

| | |
|---|---|
| 1. | ಘಟಕವನ್ನು ಪ್ರಾರಂಭಿಸಿದಾಗ ಸಹಾಯಧನ ಪಡೆದಿರುವ ವಿವರ: |
| 2. | ಇಲಾಖೆ: |
| 3. | ಯೋಜನೆಯ ಹೆಸರು: |

| | | |
|---|---|---|
| 4. | ಸಹಾಯಧನ ಪಡೆದ ವರ್ಷ: | ಮೊತ್ತ: |
| **ಊ. ಬ್ಯಾಂಕಿನ ವಿವರ:** | | |
| a. | ಸಾಲ ಪಡೆದ ಬ್ಯಾಂಕಿನ ಹೆಸರು: | |
| b. | ಕೋಡ್ ಸಂಖ್ಯೆ: | |
| c. | ಸಾಲದ ಮೊತ್ತ: | |
| d. | ಸಾಲ ಪಡೆದ ವರ್ಷ: | |
| e. | ಬಾಕಿ ಇರುವ ಸಾಲದ ಮೊತ್ತ: | ಶಾಖೆ: |
| f. | Back ended ಯಾಗಿ ಮೊತ್ತವನ್ನು ಜಮೆ ಮಾಡಬೇಕಾಗಿರುವ ಖಾತೆ ಸಂಖ್ಯೆ: | |
| g. | E.C.S ಸಂಖ್ಯೆ: | |
| ಈ ಮೇಲೆ ತಿಳಿಸಿರುವ ವಿವರಗಳು / ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದ್ದು, ಇದರಲ್ಲಿ ಯಾವುದೇ ಸುಳ್ಳು ಮಾಹಿತಿಯನ್ನು ನೀಡಿರುವುದಿಲ್ಲ ಎಂದು ಪ್ರಮಾಣಿಸುತ್ತೇನೆ. ಏನಾದರು ತಪ್ಪು ಮಾಹಿತಿ ನೀಡಿದ್ದಲ್ಲಿ ನನ್ನ ಅರ್ಜಿಯನ್ನು ತಿರಸ್ಕರಿಸಬಹುದಾಗಿರುತ್ತದೆ. | | |

**(ಫಲಾನುಭವಿ ಸಹಿ)**

ಹೆಸರು ಮತ್ತು ವಿಳಾಸ

ದೂರವಾಣಿಗೆ ಸಂಖ್ಯೆ:

ದಿನಾಂಕ:



**ಅನುಬಂಧ-2**

**ಪರಿಶೀಲನಾ ತಂಡದ ಧೃಡೀಕರಣ**

ದಿನಾಂಕ:-_______________ರಂದು ಫಲಾನುಭವಿ ರೈತರಾದ ಶ್ರೀ./ಶ್ರೀಮತಿ._______________ತಂದೆ_____________ ರವರ ವಯಸ್ಸು_______________ ಜಮೀನಿಗೆ/ ಘಟಕಕ್ಕೆ ಭೇಟಿ ನೀಡಿ, ಸ್ಥಳ ಪರಿಶೀಲನೆ ಮಾಡಿದ್ದು, ಸದರಿಯವರಿಗೆ ಸೇರಿರುವ _______________ಗ್ರಾಮದ___________________ಸರ್ವೆನಂಬರಿನಲ್ಲಿ_______________________ವಿಸ್ತೀರ್ಣದ ಸ್ವಂತ ಜಮೀನಿನಲ್ಲಿ ___________ ವರ್ಷದಲ್ಲಿ ______________ ಚ.ಮೀ ವಿಸ್ತೀರ್ಣದ ಹಸಿರುಮನೆ ನಿರ್ಮಿಸಿರುತ್ತಾರೆ. ಸದರಿ ಹಸಿರು ಮನೆಯಲ್ಲಿ___________________ ಘಟಕ ಚಟುವಟಿಕೆಗಾಗಿ **ಹೂ ಕೃಷಿಗೆ ಉತ್ತೇಜನ** ಕಾರ್ಯಕ್ರಮದಡಿಯಲ್ಲಿ ಫಲಾನುಭವಿಯಾಗಿ ಆಯ್ಕೆ ಮಾಡಬಹುದು ಎಂದು ಶಿಫಾರಸ್ಸು ಮಾಡಲಾಗಿದೆ. ಸದರಿ ಫಲಾನುಭವಿ ಹಳೆ ಗಿಡ ತೆಗೆದು ಹೊಸದಾಗಿ ಗಿಡ ನೆಟ್ಟಿರುವುದನ್ನು /ಹಸಿರುಮನೆಯ ಹಳೆ ಶೀಟ್‌ಗಳನ್ನು ಹೊಸದಾಗಿ ಮಾರ್ಗಸೂಚಿ ಪ್ರಕಾರ ಬದಲಾಯಿಸಿರುವುದನ್ನು ಪರಿಶೀಲಿಸಿ ಧೃಡೀಕರಿಸಿರುತ್ತೇವೆ. ಆದ್ದರಿಂದ ಸದರಿ ಫಲಾನುಭವಿಗೆ ಈ ಯೋಜನೆಯಡಿ ರೂ.__________________________ಮೊತ್ತವನ್ನು ಸಹಾಯಧನ ನೀಡಲು ಶಿಫಾರಸ್ಸು ಮಾಡಲಾಗಿದೆ.

**ಹೆಸರು /ಮೊಹರು ಸಹಿ**

1. ಹಿಸತೋನಿ / ಸತೋನಿ

2. ಸತೋಅ(RSK)

3. KVK/IIHR/UAS/UHS ಪ್ರತಿನಿಧಿ

**ದಿನಾಂಕ** :-

**ಸ್ಥಳ** :-

(ಪರಿಶೀಲನೆ ತಂಡದ ಮುಖ್ಯಸ್ಥರ ಹೆಸರು, ಸಹಿ ಮತ್ತು ಮೊಹರು)

## ಅನುಬಂಧ-2

## ಪರಿಶೀಲನಾ ತಂಡದ ಧೃಡೀಕರಣ

ದಿನಾಂಕ:-_______________ರಂದು ಫಲಾನುಭವಿ ರೈತರಾದ ಶ್ರೀ./ಶ್ರೀಮತಿ._______________ತಂದೆ_____________

ರವರ ವಯಸ್ಸು_______________ ಜಮೀನಿಗೆ/ ಘಟಕಕ್ಕೆ ಭೇಟಿ ನೀಡಿ, ಸ್ಥಳ ಪರಿಶೀಲನೆ ಮಾಡಿದ್ದು, ಸದರಿಯವರಿಗೆ ಸೇರಿರುವ

_______________ಗ್ರಾಮದ___________________ಸರ್ವೆನಂಬರಿನಲ್ಲಿ_______________________ವಿಸ್ತೀರ್ಣದ

ಸ್ವಂತ ಜಮೀನಿನಲ್ಲಿ ___________ ವರ್ಷದಲ್ಲಿ _______________ ಚ.ಮೀ ವಿಸ್ತೀರ್ಣದ ಹಸಿರುಮನೆ ನಿರ್ಮಿಸಿರುತ್ತಾರೆ.

ಸದರಿ ಹಸಿರು ಮನೆಯಲ್ಲಿ___________________ ಘಟಕ ಚಟುವಟಿಕೆಗಾಗಿ **ಹೂ ಕೃಷಿಗೆ ಉತ್ತೇಜನ** ಕಾರ್ಯಕ್ರಮದಡಿಯಲ್ಲಿ

ಫಲಾನುಭವಿಯಾಗಿ ಆಯ್ಕೆ ಮಾಡಬಹುದು ಎಂದು ಶಿಫಾರಸ್ಸು ಮಾಡಲಾಗಿದೆ. ಸದರಿ ಫಲಾನುಭವಿಯು _____________ ಬೆಳೆಯ___________ತಳಿಯನ್ನು ಬೆಳೆಯುತ್ತಿದ್ದು,_________ ದಿನಾಂಕರಂದು ಪರಶೀಲನಾ ಸಮಿತಿಯು ಪರಿಶೀಲಿಸಿದ ___________ಬೆಳೆಯ ಸ್ಥಿತಿಗತಿಗಳ ವಿವರಗಳು.

---

---

---

ಇದ್ದು ರೈತರು ಮೇಲೆ ತಿಳಿಸಿರುವ__________________ಬೆಳೆಯ __________________ತಳಿಯ ಗಿಡಗಳನ್ನು M/S_____________ ರವರಿಂದ ಖರೀದಿಸಿದ್ದು ಪ್ರತಿ ಗಿಡಕ್ಕೆ _________ದರದಂತೆ ಖರೀದಿಸಿ_______ಗಿಡಗಳನ್ನು ನೆಟ್ಟಿದ್ದು ಮಾರ್ಗಸೂಚಿ ಪ್ರಕಾರ ಪರಶೀಲಿಸಿ ದೃಢೀಕರಿಸಿರುತ್ತೇವೆ. ಆದ್ದರಿಂದ ಸದರಿಫಲಾನುಭವಿಗೆ ಈ ಯೋಜನೆಯಡಿ ರೂ.______________ಮೊತ್ತವನ್ನು ಸಹಾಯಧನ ನೀಡಲು ಸಮಿತಿಯು ಶಿಫಾರಸ್ಸು ಮಾಡಿದೆ.

**ಸಹಿ**

1. ಹಿಸತೋನಿ / ಸತೋನಿ ___________________________

_____________________________________________-

_____________________________________________

2. ಸತೋಅ(RSK)_________________________________

_____________________________________________

3. KVK/IIHR/UAS/UHS ಪ್ರತಿನಿಧಿ______________________

4. SIFAಸದಸ್ಯರು_____________________________

_____________________________________________

**ದಿನಾಂಕ :-**

**ಸ್ಥಳ :-**

(ಪರಿಶೀಲನೆ ತಂಡದ ಮುಖ್ಯಸ್ಥರ ಹೆಸರು, ಸಹಿ ಮತ್ತು ಮೊಹರು)



**ಅನುಬಂಧ-3**

**ಪ್ರಮಾಣ ಪತ್ರ**

ನಾನು ಶ್ರೀ./ಶ್ರೀಮತಿ.________________ತಂದೆ________________ವಯಸ್ಸು_________ಗ್ರಾಮ___________________ ಸರ್ವನೆಂಬರಿನಲ್ಲಿ _____________________ ವಿಸ್ತೀರ್ಣದ ಸ್ವಂತ/ಭೋಗ್ಯದ ಜಮೀನಿನಲ್ಲಿ_____________ ವರ್ಷದಲ್ಲಿ _______________ ಚ.ಮೀ ವಿಸ್ತೀರ್ಣದ ಹಸಿರುಮನೆ ನಿರ್ಮಿಸಿರುತ್ತೇನೆ. ಸದರಿ ಹಸಿರು ಮನೆಯಲ್ಲಿ___________________ ಪುಷ್ಪ ಬೆಳೆಯನ್ನು ಕಳೆದ ಮೂರು ವರ್ಷಗಳಿಂದ ಬೆಳೆಯುತ್ತಿರುತ್ತೇನೆ. ಘಟಕ ಚಟುವಟಿಕೆಗಾಗಿ ಪುಷ್ಪ ಉದ್ಯಮಕ್ಕೆ ಪ್ರೋತ್ಸಾಹ ಕಾರ್ಯಕ್ರಮದಡಿಯಲ್ಲಿ ಫಲಾನುಭವಿಯಾಗಿ ಆಯ್ಕೆ ಮಾಡಬಹುದು ಎಂದು ಶಿಫಾರಸ್ಸು ಮಾಡಲಾಗಿದೆ. ಸದರಿ ಫಲಾನುಭವಿ ಹಳೆ ಗಿಡ ತೆಗೆದು ಹೊಸದಾಗಿ ಗಿಡ ನೆಟ್ಟಿರುವುದನ್ನು /ಹಸಿರುಮನೆಯ ಹಳೆ ಶೀಟ್‌ಗಳನ್ನು ಹೊಸದಾಗಿ ಮಾರ್ಗಸೂಚಿ ಪ್ರಕಾರ ಬದಲಾಯಿಸಿರುವುದನ್ನು ಪರಿಶೀಲಿಸಿ ಧೃಡೀಕರಿಸಿರುತ್ತೇವೆ. ಆದ್ದರಿಂದ ಸದರಿ ಫಲಾನುಭವಿಗೆ ಈ ಯೋಜನೆಯಡಿ ರೂ.____________________________ಮೊತ್ತವನ್ನು ಸಹಾಯಧನ ನೀಡಲು ಶಿಫಾರಸ್ಸು ಮಾಡಲಾಗಿದೆ.

ANNEXURE-4

Annexure to government order no.65 HPP 2000 dated4-8-2000

CLAEM PROFERMA TO BE SUMITTED BY THE COLD STORAGE OWNERS

FOR CLEMING POWER SUBVENTIONS

1. NAME OF THE COLD STORAGE-------
2. REGISTRATION ON.----------
3. ADDRESS/TELEPHONE/FAX------
4. NAME OF THE OWNER-----
5. ADDRESS OF COLD STORAGE UNIT------
6. CAPACITY OF THE UNIT(in MTS)------
7. FLOWERS STORED FOR THE PERIOD-----
8. QUANTITY OF FLOWERS STORED-----
9. DAILY STOCK OF COMMODITY FOR THE PERIOD ----
10. CAPASCITY UTILISATION IN %(TONNAGE)------
11. CAPACITY UTILISED FOR STORING FLOWERS-------
12. PERCENTAGE OF CAPACITY UTILISED THE CAPACITY UTILISED (minimum75%)---
13. ELECTRICAL UNITS UTILISED (MONTH WISE)----
14. POWER BILL PAID------
15. ANNUAL CONSUMPTION OF POWER------
16. TOTAL AMOUNT OF SUBSIDY CLAMED @R.s1/ PER KWH-----
17. CERTIFICATE

Certified that the details furnished above are true and I abide by the decision of the director of horticulture for granting reimbursement.

# ANNEXURE-3

## Annexure to government order no.65 HPP2000 dated 4-8-2000

## APLICATION FOR REGESTRATION TO BE FILLED BY THE COLD STORAGE OWNERS

Name of the cold storage :--------

Location and Address:------------

land sy no;-------

Telephone number of the unit :-------

Date of commencement of cold storage:--------

Storage capacity : --------------------

Horsepower (motors) fixed to the cold storage -------

Monthly average power consumption (unit s):-------

Average monthly power bill:------

Daily working hours of the unit :-----

Monthly minimum charge (Electricity):-----------

Meterials stored in the cold storage :------

Owners postal address :-----

Charges levied on commodities stored:--- -

Capacity of diesel generator:----

Consumption of diesel:----------

a) Per hour -

b) Per day -

c) Per month-